| ಕರ್ನಾಟಕ ವಿಧಾನ ಪರಿಷತ್ತು | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 490 (560) |
| 2. | ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ |
| 3. | ಉತ್ತರಿಸಬೇಕಾದ ದಿನಾಂಕ | 09.03.2026 |
| 4. | ಉತ್ತರಿಸಬೇಕಾದ ಸಚಿವರು | ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಹಾಗೂ ಜೀವನೋಪಾಯ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಅನುದಾನದ ಅಂದಾಜುಗಳು ಗಣನೀಯ ಇಳಿಕೆಯಾಗಲು ಕಾರಣವೇನು; (ವಿವರ ನೀಡುವುದು). | ಕಳೆದ 3 ವರ್ಷಗಳಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಆರ್ಥಿಕ ಇಲಾಖೆಯಿಂದ ಒಟ್ಟಾರೆ ಒದಗಿಸಿರುವ ಅಂದಾಜುಗಳಲ್ಲಿ 2022-23ನೇ ಸಾಲಿಗೆ ಹೋಲಿಸಿದ್ದಲ್ಲಿ, 2023-24ನೇ ಸಾಲಿನಲ್ಲಿ ಶೇ.7.37% ನಷ್ಟು ಅನುದಾನ ಏರಿಕೆಯಾಗಿರುತ್ತದೆ. 2023-24 ನೇ ಸಾಲಿಗೆ ಹೋಲಿಸಿದಲ್ಲಿ, 2024-25 ನೇ ಆರ್ಥಿಕ ವರ್ಷದಲ್ಲಿ ಶೇ.5.43% ನಷ್ಟು ಅನುದಾನ ಏರಿಕೆಯಾಗಿರುತ್ತದೆ.<br><br>ಮುಂದುವರೆದು, 2024-25ನೇ ಸಾಲಿಗೆ ಹೋಲಿಸಿದಲ್ಲಿ, ಪ್ರಸ್ತುತ 2025-26 ನೇ ಸಾಲಿನಲ್ಲಿ ಶೇ.5.70% ರಷ್ಟು ಅನುದಾನವು ಹೆಚ್ಚುವರಿಯಾಗಿ ಅನುಮೋದನೆಗೊಂಡಿರುತ್ತದೆ.<br><br>ಕಳೆದ 3 ವರ್ಷಗಳಲ್ಲಿ ಹಾಗೂ ಪ್ರಸ್ತುತ 2025-26 ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಲೆಕ್ಕ ಶೀರ್ಷಿಕೆ 2210-Revenue & 4210-Capital ಅಡಿಯಲ್ಲಿ ಒಟ್ಟಾರೆ ಒದಗಿಸಿರುವ ಅನುದಾನದ ಅಂದಾಜುಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| ಆ) | 2025-26ನೇ ಸಾಲಿನ ಪ್ರಸ್ತಾವನೆಗೂ ಅನುಮೋದಿತ ಅನುದಾನಕ್ಕೂ ರೂ.2651.77 ಕೋಟಿ ಕೊರತೆಯಾಗಲು ಕಾರಣವೇನು; (ವಿವರ ನೀಡುವುದು) | ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಸಲ್ಲಿಸುವ ಬೇಡಿಕೆಗನುಸಾರವಾಗಿ ಆಯವ್ಯಯ ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗುವುದು.<br><br>ಅದರಂತೆ, 2025-26ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2210-Revenue ಅಡಿಯಲ್ಲಿ ರೂ.6105.90 ಕೋಟಿಗಳ ಆಯವ್ಯಯ ಬೇಡಿಕೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸದರಿ ಆರ್ಥಿಕ ವರ್ಷಕ್ಕೆ ರೂ.3559.54 ಕೋಟಿಗಳನ್ನು ಆರ್ಥಿಕ ಇಲಾಖೆಯು ಅನುಮೋದಿಸಿ ಒದಗಿಸಲಾಗಿರುತ್ತದೆ.<br><br>2025-26ನೇ ಸಾಲಿನ ಲೆಕ್ಕ ಶೀರ್ಷಿಕೆ 2210-Revenue ಅಡಿಯಲ್ಲಿನ ಪ್ರಸ್ತಾವನೆಗೂ ಅನುಮೋದಿತ ಅನುದಾನಕ್ಕೂ ರೂ.2546.36 ಕೋಟಿಗಳ ವ್ಯತ್ಯಾಸವಿರುತ್ತದೆ. |

| | | |
|---|---|---|
| | | ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿರುವ ಪ್ರಸ್ತಾವನೆ ಹಾಗೂ ಸ್ವಾಯತ್ತ ಸಂಸ್ಥೆಗಳಲ್ಲಿನ ಆಂತರಿಕ ಸಂಪನ್ಮೂಲವನ್ನು ಪರಿಗಣಿಸಿ ಆಯವ್ಯಯ ಅನುದಾನವನ್ನು ಅನುಮೋದಿಸಲಾಗುತ್ತದೆ. ಆದುದರಿಂದ ಪ್ರಸ್ತಾವನೆಗೂ ಅನುಮೋದಿತ ಅನುದಾನಕ್ಕೂ ವ್ಯತ್ಯಾಸವಾಗುವುದರಿಂದ ಕೊರತೆ ಕಂಡುಬರುತ್ತದೆ.<br><br>2025-26ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2210-Revenue ಅಡಿಯ ಉಪ ಲೆಕ್ಕ ಶೀರ್ಷಿಕೆವಾರು ಪ್ರಸ್ತಾಪಿಸಲಾದ ಅನುದಾನದ ವಿವರ ಹಾಗೂ ಅನುಮೋದಿಸಲಾದ ಅನುದಾನದ ವಿವರ ಹಾಗೂ ವ್ಯತ್ಯಾಸದ ವಿವರವಾದ ಮಾಹಿತಿಯನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |
| ಇ) | ಯು.ಜಿ.ಸಿ ಮತ್ತು ಪಿಜಿ ಸೀಟುಗಳಲ್ಲಿ ಶೇ.15% ಎನ್.ಆರ್.ಐ ಸೀಟುಗಳನ್ನಾಗಿ ಪರಿವರ್ತಿಸುವ ಕುರಿತು ಸರ್ಕಾರದ ನಿಲುವೇನು? | ರಾಜ್ಯದ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿನ ಎಂಬಿಬಿಎಸ್ ಸೀಟುಗಳಲ್ಲಿ ಅನಿವಾಸಿ ಭಾರತೀಯ ಕೋಟಾದಡಿ (ಎನ್.ಆರ್.ಐ.) ಸೀಟುಗಳನ್ನು ಮೀಸಲಿರಿಸುವ ಬಗ್ಗೆ. ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 451 ಎಂಎಂಸಿ 2025, ದಿನಾಂಕ:04.09.2025ರಲ್ಲಿ 2025-26ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ, ಎನ್.ಎಂ.ಸಿ.ಯಿಂದ ಹೆಚ್ಚುವರಿಯಾಗಿ ಮಂಜೂರಾದ ಸರ್ಕಾರಿ ಸ್ವಾಯತ್ತ ಸಂಸ್ಥೆಗಳಲ್ಲಿನ 450 ಎಂ.ಬಿ.ಬಿ.ಎಸ್ ಸೀಟುಗಳಲ್ಲಿ ಅನಿವಾಸಿ ಭಾರತೀಯ ಕೋಟಾದ ಸೀಟುಗಳನ್ನು (ಎನ್.ಆರ್.ಐ.) ಶೇಕಡ 15 ರಷ್ಟನ್ನು ಮೀರದಂತೆ 57 ಎಂ.ಬಿ.ಬಿ.ಎಸ್ ಸೀಟುಗಳನ್ನು ಮೀಸಲಿರಿಸಲಾಗಿರುತ್ತದೆ, 2026-27ನೇ ಸಾಲಿಗೆ ಅನಿವಾಸಿ ಭಾರತೀಯ ಕೋಟಾದಡಿ (ಎನ್.ಆರ್.ಐ.) ಸೀಟುಗಳನ್ನು ಮೀಸಲಿರಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>(**ವಿವರಗಳನ್ನು ಅನುಬಂಧ 03 ಹಾಗೂ 04 ರಲ್ಲಿ ಒದಗಿಸಿದೆ** ) |

ಸಂಖ್ಯೆ: ಎಂಇಡಿ/65/ಆರ್ಐ/2026

**( ಡಾ|| ಶರಣಪ್ರಕಾಶ ಆರ್. ಪಾಟೀಲ್)**
ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮ ಶೀಲತೆ ಹಾಗೂ ಜೀವನೋಪಾಯ ಸಚಿವರು

## ANNEXURE-1

## Comparison of Budget Estimates from 2022-23 to 2025-26

(Rs. In lakhs)

| Sl. No. | HOA | 2022-23 Allocation | 2023-24 Allocation | Percentage of increase / decrease over 2022-23 | 2024-25 Allocation | Percentage of increase / decrease over 2023-24 | 2025-26 Allocation | Percentage of increase / decrease 2024-25 |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | 2210 - Revenue | 344322.94 | 374934.46 | 8.89 | 369225.08 | -1.52 | 410688.89 | 11.23 |
| 2 | 4210- Capital | 72398.66 | 72501.00 | 0.14 | 102522.00 | 41.41 | 87962.00 | -14.20 |
| **Total** | | **416721.60** | **447435.46** | **7.37** | **471747.08** | 5.43 | **498650.89** | **5.70** |
| **Total (Rs. In crores)** | | **4167.22** | **4474.35** | **7.37** | **4717.47** | **5.43** | **4986.51** | **5.70** |

Director ... Bengaluru

ANNEXURE-2

# BUDGET ESTIMATES FOR THE FY 2025-26

(Rs. In lakhs)

| Sl. No. | Head of Account | Proposed for 2025-26 | BE Approved 2025-26 | Deficit 5=(3-4) |
|---|---|---|---|---|
| 1 | 2 | 3 | 4 | 5 |
| 1 | 101-GIA Salaries | 276898.84 | 206337.14 | 70561.70 |
| 2 | 103-Grant in Aid General | 165419.97 | 29899.95 | 135520.02 |
| 3 | 112-Grant in Aid Stipend | 48488.21 | 42386.03 | 6102.18 |
| 4 | 115-Grant in Aid Contract / Outsource | 81977.98 | 52856.81 | 29121.17 |
| 5 | 118-Grant in Aid Pension | 26995.39 | 20616.61 | 6378.78 |
| 6 | 422-SCP | 8266.77 | 2825.90 | 5440.87 |
| 7 | 423-TSP | 2542.66 | 1031.40 | 1511.26 |
| | **Total** | **610589.82** | **355953.84** | **254635.98** |
| | **Total (Rs. In crores)** | **6105.90** | **3559.54** | **2546.36** |



Chief Accounts Officer
Cum Finance Advisor
Medical Education, Bengaluru

ಅನುಬಂಧ-3



ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿನ ಎಂಬಿಬಿಎಸ್ ಸೀಟುಗಳಲ್ಲಿ ಅನಿವಾಸಿ ಭಾರತೀಯ ಕೋಟಾದಡಿ (ಎನ್.ಆರ್.ಐ.) ಸೀಟುಗಳನ್ನು ಮೀಸಲಿರಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರ ಏಕಕಡತ ಸಂಖ್ಯೆ: 1432093

***

ಪ್ರಸ್ತಾವನೆ:

ರಾಜ್ಯದಲ್ಲಿ ಪ್ರತಿ ಜಿಲ್ಲೆಗೊಂದು ವೈದ್ಯಕೀಯ ಸಂಸ್ಥೆಯನ್ನು ಪ್ರಾರಂಭಿಸಬೇಕೆಂಬುವುದು ರಾಜ್ಯ ಸರ್ಕಾರದ ನೀತಿಯಾಗಿರುತ್ತದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಈಗಾಗಲೇ ಅನುಷ್ಠಾನದ ಕ್ರಮ ಕೈಗೊಂಡು ರಾಜ್ಯದಲ್ಲಿ ಒಟ್ಟು 22 ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರಡಿ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿವೆ.

ವೈದ್ಯಕೀಯ ಕೋರ್ಸುಗಳ ಪ್ರವೇಶವನ್ನು the Karnataka Education Institutions (Prohibition of Capitation Fee) Act, 1984 (Karnataka Act 37 of 1984) ರಡಿ ರೂಪಿಸಲಾದ the Karnataka Selection of Candidates for admission to Government Seats in Professional Education Instutitons Rules, 2006 ನಿಯಮಗಳು ಮತ್ತು the Karnataka Professional Educational Institutuions (Regulation of Admission and Determination of Fee) Act, 2006 (Karnataka Act No. 8 of 2006)ಗಳಲ್ಲಿ ಅವಕಾಶ ಕಲ್ಪಿಸಿರುವಂತೆ ಪ್ರವೇಶಾತಿ ಪ್ರಕ್ರಿಯೆ ನಡೆಸಲಾಗುತ್ತಿದೆ.

Indian Medical Council Act, 1956 (102 of 1956) ರಡಿಯಲ್ಲಿ the Regulations on Graudate Medical Education Amendment, 2017 ಜಾರಿಗೆ ಬಂದಿದ್ದು, ಅದರನ್ವಯ ಶೇಕಡ 15ರಷ್ಟು ಸೀಟುಗಳನ್ನು All India Quota ಮತ್ತು ಉಳಿದ ಶೇಕಡ 85ರಷ್ಟು ಸೀಟುಗಳನ್ನು State Quota ಎಂದು ಮೀಸಲಿರಿಸಲು ನಿಯಮಗಳನ್ನು ಉಪಬಂಧಿಸಲಾಗಿದೆ. ಅದರಂತೆ, ರಾಜ್ಯ ಸರ್ಕಾರವು ಸೀಟುಗಳನ್ನು ಮೀಸಲಿರಿಸುತ್ತಿದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದ SLP No. 9932/2004, 9935/2004, 276/2004 P.A Inamdar Vs State of Maharashtra (2005) 6 SCC 537 ಮತ್ತು Writ Petition (Civil) NO. 689/2017 Consortium of Deemed Univerities in Karnataka (Codeunik) & another Vs Union of India and others ಪ್ರಕರಣಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಬಲವರ್ಧನೆಗೊಳಿಸುವ ನಿಮಿತ್ತ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ವಿಸ್ತರಿಸುವ ಹಿನ್ನೆಲೆಯಲ್ಲಿ, ಎನ್.ಆರ್.ಐ. ಕೋಟಾದ ಸೀಟುಗಳನ್ನು ಶೇಕಡ 15ರಷ್ಟು ಮೀಸಲಿರಿಸಲು ನಿರ್ದೇಶನ ನೀಡಿದೆ. ಅದರಂತೆ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಖಾಸಗಿ ಸಂಸ್ಥೆಗಳ ಲಭ್ಯವಿರುವ ಒಟ್ಟು ಸೀಟುಗಳಲ್ಲಿ ಶೇಕಡ 15ರಷ್ಟು ಸೀಟುಗಳನ್ನು ಮೀರದಂತೆ ಎನ್.ಆರ್.ಐ. ಗೆ ಮೀಸಲಿರಿಸಿದೆ.

ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಸರ್ಕಾರದ ಅನುದಾನದೊಂದಿಗೆ ಹಾಗೂ ಅಲ್ಪಮಟ್ಟದ ಅನುದಾನ ಸಂಗ್ರಹಣೆಯೊಂದಿಗೆ ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ, ವಿದ್ಯಾರ್ಥಿಗಳಿಗೆ ಉನ್ನತ ಗುಣಮಟ್ಟದ ಶೈಕ್ಷಣಿಕ ಸೌಲಭ್ಯಗಳನ್ನು, ಶೈಕ್ಷಣಿಕ ಚಟುವಟಿಕೆಗಳನ್ನು ವಿಸ್ತರಿಸಲು ಕಷ್ಟಸಾಧ್ಯವಾಗುತ್ತಿದೆ. ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಆರ್ಥಿಕವಾಗಿ ಸ್ವಾವಲಂಬಿ ಸಂಸ್ಥೆಗಳಾಗದೆ ಇರುವುದರಿಂದ, ಉನ್ನತ ವ್ಯಾಸಂಗವನ್ನು ಪೂರ್ಣಪ್ರಮಾಣದಲ್ಲಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ, ಈಗಾಗಲೇ ದೇಶದ ಹರಿಯಾಣ, ರಾಜಸ್ಥಾನ, ಹಿಮಾಚಲ್ ಪ್ರದೇಶ ಮತ್ತು ಪುದುಚೇರಿ ರಾಜ್ಯಗಳಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಅನಿವಾಸಿ ಭಾರತೀಯ ಕೋಟಾದ ಸೀಟುಗಳನ್ನು ಮೀಸಲಿರಿಸಿ, ಸ್ವಾವಲಂಬಿ ಸಂಸ್ಥೆಗಳಾಗಿರುವುದನ್ನು ಮಾದರಿಯನ್ನಾಗಿ ಪರಿಗಣಿಸಿ ಹಾಗೂ ಈಗಾಗಲೇ ರಾಜ್ಯ ಸರ್ಕಾರದ ಅಧೀನದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳು, ತೋಟಗಾರಿಕೆ ಮತ್ತು ಪಶುವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಎನ್.ಆರ್.ಐ. ಕೋಟಾದ ಸೀಟುಗಳನ್ನು ಮೀಸಲಿರಿಸುವುದನ್ನು ಮತ್ತು ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ 4ನೇ ವರದಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಹಣಕಾಸು ಸುಧಾರಿಸಲು, ಕರ್ನಾಟಕದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್.ಆರ್.ಐ. ಕೋಟಾವನ್ನು ಅಳವಡಿಸಿಕೊಳ್ಳಲು ಶಿಫಾರಸ್ಸು ಮಾಡಿರುವುದನ್ನು ಸಹ ಪರಿಗಣಿಸಿ, ರಾಜ್ಯ ಸರ್ಕಾರದಲ್ಲಿನ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಅನಿವಾಸಿ ಭಾರತೀಯ ಕೋಟಾದ ಸೀಟುಗಳನ್ನು ಮೀಸಲಿರಿಸಲು ರಾಜ್ಯ ಸರ್ಕಾರವು ಉದ್ದೇಶಿಸಿರುತ್ತದೆ.

ಅಲ್ಲದೆ, ಈ ಮೀಸಲಾತಿಯಿಂದಾಗಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಈಗಾಗಲೇ ಹೊಂದಿರುವ ಪ್ರವೇಶಮಿತಿಯ ಸಂಖ್ಯೆಯನ್ನು ಹೆಚ್ಚಿಸಲು ಅನುಕೂಲಕರವಾಗುತ್ತದೆ. ಇದರಿಂದಾಗಿ, ಸ್ವಾಯತ್ತ ಸಂಸ್ಥೆಗಳು ಆರ್ಥಿಕವಾಗಿ ಸಬಲಗೊಂಡು, ಸಂಸ್ಥೆಗಳಲ್ಲಿ ಕೊರತೆ ಇರುವ ಮಾನವ ಸಂಪನ್ಮೂಲ, ಉಪಕರಣ-ಪೀಠೋಪಕರಣ, ಯಂತ್ರೋಪಕರಣ ಹಾಗೂ ಮತ್ತಿತರೆ ಮೂಲಭೂತ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಸಹಕಾರಿಯಾಗಲಿದೆ. ಮುಂದುವರೆದು, ಪದವಿ ಕೋರ್ಸುಗಳೊಂದಿಗೆ ಸ್ನಾತಕೋತ್ತರ ಪದವಿಗಳನ್ನು ಹೊಂದಲು, ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದ ಜೊತೆಗೆ ಪ್ರಮಾಣೀಕೃತ ವ್ಯಾಸಂಗವನ್ನು ಹೊಂದಲು ಮತ್ತು ಬಡರೋಗಿಗಳಿಗೆ ಉನ್ನತ ದರ್ಜೆಯ ವೈದ್ಯಕೀಯ ಚಿಕಿತ್ಸೆಯನ್ನು ನೀಡಲು ಅನುಕೂಲವಾಗುತ್ತದೆ. ರಾಜ್ಯ ಸರ್ಕಾರವು ಹಲವು ಆಯಾಮಗಳ ನಿಟ್ಟಿನಲ್ಲಿ ಅವಲೋಕಿಸಿ, ಅನಿವಾಸಿ ಭಾರತೀಯ ಕೋಟಾದ ಸೀಟುಗಳನ್ನು ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಿಗೆ 2025-26ನೇ ಶೈಕ್ಷಣಿಕ ವರ್ಷಕ್ಕೆ ಎನ್.ಎಂ.ಸಿ. ಯಿಂದ ಹೆಚ್ಚುವರಿಯಾಗಿ ಮಂಜೂರಾದ ಸೀಟುಗಳಲ್ಲಿ ಮಾತ್ರ ಅಳವಡಿಸಿಕೊಳ್ಳಲು ಹಾಗೂ ಪ್ರತಿ ಅನಿವಾಸಿ ಭಾರತೀಯ ಕೋಟಾದ ಸೀಟಿಗೆ ರೂ. 25.00 ಲಕ್ಷಗಳ ವಾರ್ಷಿಕ ಶುಲ್ಕವನ್ನು ನಿಗದಿಪಡಿಸಲು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 451 ಎಂಎಂಸಿ 2025, ಬೆಂಗಳೂರು, ದಿನಾಂಕ: 04.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿನ ಎಂಬಿಬಿಎಸ್ ಸೀಟುಗಳಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಅನಿವಾಸಿ ಭಾರತೀಯ ಕೋಟಾದ ಸೀಟುಗಳನ್ನು (ಎನ್.ಆರ್.ಐ.) ಶೇಕಡ 15 ರಷ್ಟನ್ನು ಮೀರದಂತೆ ಮೀಸಲಿರಿಸಿ, ಆದೇಶಿಸಿದೆ.

1. 2025-26ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ, ಎನ್.ಎಂ.ಸಿ. ಯಿಂದ ಹೆಚ್ಚುವರಿಯಾಗಿ ಮಂಜೂರಾದ ಸರ್ಕಾರಿ ಸ್ವಾಯತ್ತ ಸಂಸ್ಥೆಗಳಲ್ಲಿನ ಎಂ.ಬಿ.ಬಿ.ಎಸ್ ಸೀಟುಗಳಲ್ಲಿ ಮಾತ್ರ ಮೀಸಲಿರಿಸತಕ್ಕದ್ದು;

2. The Karnataka Selection of Candidates for admission to Government Seats in Professional Education Instutitons Rules, 2006 ನಿಯಮಗಳು ಮತ್ತು the Karnataka Professional Educational Institutuions (Regulation of Admission and Determination of Fee) Act, 2006 (Karnataka Act No. 8 of 2006) ರನ್ವಯ ಪ್ರವೇಶಾತಿ ಕಲ್ಪಿಸತಕ್ಕದ್ದು.
3. ಪ್ರತಿ ಅನಿವಾಸಿ ಭಾರತೀಯ ಕೋಟಾದ ಸೀಟಿಗೆ ರೂ. 25.00 ಲಕ್ಷಗಳ ವಾರ್ಷಿಕ ಶುಲ್ಕವನ್ನು ನಿಗದಿಪಡಿಸತಕ್ಕದ್ದು.
4. ಒಂದುವೇಳೆ, ಸದರಿ ಅನಿವಾಸಿ ಭಾರತೀಯ ಕೋಟಾದ ಸೀಟುಗಳು ಭರ್ತಿಯಾಗದಿದ್ದ ಪಕ್ಷದಲ್ಲಿ, ಸದರಿ ಸೀಟುಗಳನ್ನು ಸಾಮಾನ್ಯ ಅಭ್ಯರ್ಥಿಯಿಂದ ಮೇಲ್ಕಂಡ ವಾರ್ಷಿಕ ಶುಲ್ಕದೊಂದಿಗೆ ಭರ್ತಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
11.04.19
(ಬಿ.ಎಸ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ-3,
ವೈದ್ಯಕೀಯ ಶಿಕ್ಷಣ ಇಲಾಖೆ

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು -560001.
2. ಪ್ರಧಾನ ಮಹಾಲೇಖಪಾಲರು (ಜಿ&ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು -560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಪಾರ್ಕ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-01
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಅಧ್ಯಕ್ಷರು, ರಾಷ್ಟ್ರೀಯ ವೈದ್ಯಕೀಯ ಆಯೋಗ, ನವದೆಹಲಿ.
6. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
7. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
8. ಕುಲಸಚಿವರು, ಆರ್‌ಜಿಯುಹೆಚ್ಎಸ್., ಬೆಂಗಳೂರು.
9. ನಿರ್ದೇಶಕರು ಮತ್ತು ಡೀನ್/ವಿಶೇಷಾಧಿಕಾರಿಗಳು, ಎಲ್ಲಾ ಸ್ವಾಯತ್ತ ಸಂಸ್ಥೆಗಳು / ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ (ಡಿಎಂಇ ಮುಖಾಂತರ)
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸನ್ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಅನುಬಂಧ-4

# Distribution of I MBBS Increase intake seats in Government Medical Colleges for the academic year 2025-26

| Sl.No. | Name of the College | Intake | AIQ 15% | Balance | NRI 15% | State Govt seat 85% |
|---|---|---|---|---|---|---|
| | **Government Medical College** | A | B | C=A-B | D=C of 15% | E=C-D |
| 1 | Belagavi Institute of Medical Sciences, Belagavi | 50 | 8 | 42 | 6 | 36 |
| 2 | Chikkaballapura Institute of Medical Sciences, Chikkaballapura | 50 | 7 | 43 | 7 | 36 |
| 3 | Hassan Institute of Medical Sciences, Hassan | 50 | 8 | 42 | 6 | 36 |
| 4 | Mysore Medical College and Research Institute Mysore | 50 | 7 | 43 | 7 | 36 |
| 5 | Shri Atal Bihari Vajpayee Medical College & Research InstituteBangalore | 50 | 7 | 43 | 7 | 36 |
| 6 | Gulbarga Institute of Medical Sciences, Gulbarga | 50 | 7 | 43 | 6 | 37 |
| 7 | Raichur Institute of Medical Sciences,Raichur | 50 | 8 | 42 | 6 | 36 |
| 8 | Vijaynagar Institute of Medical Sciences, Bellary | 50 | 7 | 43 | 6 | 37 |
| 9 | Bidar Institue of Medical Sciences, Bidar | 50 | 7 | 43 | 6 | 37 |
| | **Govt Colleges Total** | **450** | **66** | **384** | **57** | **327** |